O.S. No- 244/2023

Pw-1

<u>ದಿನಾಂಕಃ 16-09-2025-ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟಿ ಸವಾಲುಃ ಶ್ರೀ ಡಿ ಡಿ ಜೆ 1 ನೇ ಪ್ರತಿವಾದಿ ಪರ ವಕೀಲರಿಂದಃ** ಮಂದಾಕಿಣಿ ಮೃತರಾಗಿದ್ದಾರೆ ಎಂದರೆ ಸರಿ. ಮಂದಾಕಿಣಿಯವರಿಗೆ ನಾನು ವಾರಸುದಾರರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಮಂದಾಕಿಣಿಯವರಿಗೆ ನೀಲಕಂಠ ಸ್ವಾಮಿ ಎಂಬ ಸಹೋದರ ಇದ್ದ ಎಂದರೆ ಸರಿ. ಮಂದಾಕಿಣಿಯವರು ಮೃತರಾದ ನಂತರ ಅವರ ಚರ ಮತ್ತು ಸ್ಥಿರ ಆಸ್ತಿಗಳಿಗೆ ನಾವೇ ವಾರಸುದಾರರು ಎಂದು ಯಾವುದೇ ನ್ಯಾಯಾಲಯದಿಂದ ಡಿಕ್ರಿ ಆದೇಶ ಪಡಿದಿಲ್ಲ ಆದರೆ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಸಲು ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ ನಾನು ಹಾಜರು ಪಡಿಸಿದ್ದೇನೆ. ನಾನು ಈಗ ಹಾಜರು ಪಡಿಸಿದ ದಾಖಲೆ ಧೃಡಿಕೃತ ದಾಖಲೆ ಆಗಿರುತ್ತದೆ. ಮಂದಾಕಿಣಿಯವರಿಗೆ ಬ್ರೆನ್ ಸ್ಟ್ರೋಕ್ ಆಗಿದ್ದರಿಂದ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಹಾಗಾಗಿ ದಾಖಲೆಗಳು ಅವರ ಹತ್ತಿರಾನೇ ಇದ್ದಾವೆ. ಮಂದಾಕಿಣಿಯವರಿಗೆ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇತರ ದಾಖಲೆಗಳ ಬಗ್ಗೆ ಗೊತ್ತಿಲ್ಲ ಆದರೆ ನನಗೆ ಈ ದಾಖಲ ಬಗ್ಗೆ ಮಾತ್ರ ಗೊತ್ತು. ಅಸಲು ಖರೀದಿ ಪತ್ರ ಎಲ್ಲಿದೆ ಎಂದು ಹುಡುಕಾಡುವ ಪ್ರಯತ್ನ ಮಾಡಿಲ್ಲ ಎಂದರೆ ಮಂದಾಕಿಣಿಯವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮಂದಾಕಿಣಿಯವರಿಗೆ ಬ್ರೆನ್ ಸ್ಟ್ರೋಕ್ ಆದ ನಂತರ ಯಾವುದೇ ವ್ಯವಾಹರಗಳ ಬಗ್ಗೆ ನನಗೆ ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ವ್ ಯವಾಹರದ ಬಗ್ಗೆ ನನಗೆ ಮಾಹಿತಿ ಇತ್ತು. ಮಂದಾಕಿಣಿಯವರು ಈ ದಾವೆಯಲ್ಲಿನ ವ್ಯವಹಾರದ ಬಗ್ಗೆ ನನಗೆ ಹೇಳಿಲ್ಲ ಎಂದರೆ ಈ ವ್ಯವಹಾರ ನನ್ನ ಉಪಸ್ಥಿತಿಯಲ್ಲಿ ಆಗಿರುತ್ತದೆ. ಮಂದಾಕಿಣಿಯವರು ರೂ.20,000/- ಈ ಖರೀದಿ ವ್ಯವಹಾರ ಬಗ್ಗೆ ಹೇಳಿಲ್ಲ ಎಂದರೆ ಪ್ರತಿವಾದಿಯರು ನನ್ನ ಸಮಕ್ಷಮ ಹಣದ ವ್ಯವಹಾರದ ಬಗ್ಗೆ ಮಂದಾಕಿಣಿಯವರಿಗೆ ಮಾತನಾಡಿರುತ್ತಾರೆ. ಸಾಕ್ಷಿ ಮುಂದುವರೆದು ಮಂದಾಕಿಣಿಯವರು "ನನಗೆ ಆರೋಗ್ಯ ಸರಿಯಿಲ್ಲ ಖರೀದಿ ಹಾಕಿ ಕೊಡುವುದಾದರೆ ಕೊಡು ಇಲ್ಲ ಎಂದರೆ ನನ್ನ ಹಣ ಕೊಡು " ಎಂದು ಪ್ರತಿವಾದಿಯರಿಗೆ ಹೇಳಿರುತ್ತಾರೆ. ಖರೀದಿ ವ್ಯವಹಾರ ಉಪನೊಂದಣಾಧಿಕಾರಿಯವರು ಕಚೇರಿಯಲ್ಲಿ ನನ್ನ ಉಪಸ್ಥಿತಿಯಲ್ಲಿ ಆಗಿದೆ. ಮಂದಾಕಿಣಿಯವರು ಲೇಡಿಸ್ ಹಾಸ್ಟೇಲ್ ನಲ್ಲಿ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದರು.

ಮಂದಾಕಿಣಿಯವರಿಗೆ ವಿವಾಹವಾಗಿರಲಿಲ್ಲ ಹಾಗೂ ವಾರುಸುದಾರರು ಇರಲಿಲ್ಲ ಹಾಗಾಗಿ ಅವರಿಗೆ ಆಸ್ತಿಯನ್ನು ಖರೀದಿಸುವ ಪ್ರಮಯ ಇರಲಿಲ್ಲ ಎಂದರೆ ಸರಿಯಲ್ಲ. ಈ ಖರೀದಿ ಕರಾರು ಆಗುವ ಸಂದರ್ಭದಲ್ಲಿ ಅವರು ವಾರ್ಡನ ಕೆಲಸ ನಿರ್ವಹಿಸುತ್ತಿದ್ದರು. ಅವರಿಗೆ ಬೇರೆ ಯಾವುದೇ ಮೂಲಗಳಿಂದ ಆದಾಯ ಇರಲಿಲ್ಲ ಎಂದರೆ ಸರಿ. ಅವರಿಗೆ ಪ್ರತಿ ತಿಂಗಳು ಅವರ ಖಾತೆಗೆ ಸಂಬಂಳ ಜಮೆಯಾಗುತ್ತಿತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ನೋಡಲು ಮಂದಾಕಿಣಿ ಹಾಗೂ ನಾನು ಹೋಗಿದ್ದೇವು. ದಾವಾ ಆಸ್ತಿಯ ಅಳತೆ ನೆನಪಿಲ್ಲ. ಈ ವ್ಯವಹಾರ ಆಕ್ಟೋಬರ ತಿಂಗಳ 2019 ರಲ್ಲಿ ಆಗಿದೆ. ಪ್ರತಿವಾದಿಯರ ಮನೆ ನಮ್ಮ ಮನೆ ಪಕ್ಕ ಇದೆ ಆದ್ದರಿಂದ ವಿಶ್ವಾಸದ ಮೇಲೆ ಈ ವ್ಯವಹಾರವನ್ನು ಮಾಡಿರುತ್ತೇವೆ. ಮಂದಾಕಿಣೆಯರು ರೂ.5,00,000/- ಹಣವನ್ನು ಬೆಂಗಳೂರನಿಂದ ಬರುವಾಗ ಅವರ ಜೊತೆಗೆ ತಂದಿದ್ದರು. ಅವರು ಬಂದ ಎರಡು ದಿನಗಳ ನಂತರ ಈ ವ್ಯವಹಾರವಾಗಿರುತ್ತದೆ. ಮಂದಾಕಿಣಿಯವರ

ಬ್ಯಾಂಕ ಖಾತೆಯ ಪಾಸ ಬುಕ್ಕನ್ನು ಅಥವಾ ಅಕೌಂಟ ಸ್ಟೇಟಮೆಂಟ ಹಾಜರು ಪಡಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಿದ್ದರಿಂದ ನಮ್ಮಿಂದ ಹಣ ಪಡೆದು ಭದ್ರತೆಗಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. 1 ನೇ ಪ್ರತಿವಾದಿ ಹಣ ಮರುಪಾವತಿಸಿದರೆ ಖರೀದಿ ಪತ್ರವನ್ನು ರದ್ದು ಮಾಡುವುದಾಗಿ ಕರಾರು ಆಗಿತ್ತು ಎಂದರೆ ಸರಿ. ಒಂದು ವರ್ಷದ ಒಳಗಾಗಿ ಹಣ ಮರುಪಾವತಿಸದೆ ಇದ್ದರೆ ಖರೀದಿ ಪತ್ರ ಆಗಿದೆ ಎಂದು ಭಾವಿಸತಕ್ಕದ್ದು ಎಂದು ಕರಾರು ಆಗಿತ್ತು ಎಂದರೆ ಸರಿ. ಪ್ರತಿವಾದಿ ಒಂದು ವರ್ಷದ ಅವಧಿ ಒಳಗಾಗಿ ಹಣವನ್ನು ಮರುಪಾವತಿಸಲಿಲ್ಲ. ಮಂದಾಕಿಣಿಯವರು ಜೀವಂತವಿದ್ದಾಗ ಅವಧಿ ಮುಗಿದ ನಂತರ ಖರೀದಿ ಕರಾರು ಪತ್ರವನ್ನು ಬರೆದು ಕೊಡುವಂತೆ 1 ನೇ ಪ್ರತಿವಾದಿಗೆ ಯಾವುದೇ ನೋಟಿಸ ನೀಡಿಲ್ಲ ಎಂದರೆ ಸರಿ. ಮಂದಾಕಿಣಿಯವರು ಈ ಸಂಬಂಧವಾಗಿ 1 ನೇ ಪ್ರತಿವಾದಿಯ ವಿರುದ್ಧ ಯಾವುದೇ ದಾವೆ ದಾಖಲಿಸಿಲ್ಲ ಎಂದರೆ ಸರಿ.

ಮಂದಾಕಿಣಿಯವರು ಬೆಂಗಳೂರಲ್ಲೆ ವಾಸಮಾಡಿಕೊಂಡು ಇದ್ದರು ಹಾಗೂ ನಾನು ಜಮಖಂಡಿಯಲ್ಲಿ ವಾಸಮಾಡಿಕೊಂಡಿದ್ದೇನೆ ಎಂದರೆ ಸರಿ. ಆದ್ದರಿಂದ ಈ ವ್ಯವಹಾದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಂದಾಕಿಣಿ 1 ನೇ ಪ್ರತಿವಾದಿಯಿಂದ ಪೂರ್ತಿ ಹಣ ಪಡೆದಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಣವನ್ನು ಮಂದಾಕಿಣಿಯವರ ಬ್ಯಾಂಕ ಖಾತೆಗೆ ವರ್ಗಾಯಿಸಿದ್ದಾರೆ ಎಂದರೆ ಸರಿಯಲ್ಲ. ರೂ.4,80,000/- ಗಳ ಜೊತೆಗೆ ರೂ.20,000/- ಹಾಗೂ ಬಡ್ಡಿ ಸಮೇತ ಮಂದಾಕಿಣಿಯವರಿಗೆ ಮರುಪಾವತಿಸ್ಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾಸಿಕ ಕಂತಿನಂತೆ ರೂ.11,000/- ಗಳಂತೆ ಒಟ್ಟು 13 ಕಂತುಗಳಲ್ಲಿ ರೂ.1,54,000/- ಹಣವನ್ನು ಮಂದಾಕಿಣಿಯವರ ಬ್ಯಾಂಕ ಖಾತೆಗೆ ಜಮಾ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪೆಬ್ರವರಿ-2022 ರಲ್ಲಿ ರೂ.50,000/- ಹಣ ಹಾಗೂ ಜೂನ್-2022 ರಲ್ಲಿ ರೂ.50,000/- ಹಣವನ್ನು ಮರುಪಾವತಿಸಿದ್ದಾರೆ ಎಂದರೆ ಸರಿಯಲ್ಲ. 2021 ರಲ್ಲಿ ಮಂದಾಕಿಣಿಯವರ ಆರೋಗ್ಯ ಸರಿಯಿಲ್ಲ ಎಂದು 1 ನೇ ಪ್ರತಿವಾದಿಯಿಂದ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ಆರೋಗ್ಯ ಸರಿಯಾದ ನಂತರ ಖರೀದಿ ಕರಾರು ಪತ್ರವನ್ನು ರದು ಮಾಡಿಕೊಡುವುದಾಗಿ ಮಂದಾಕಿಣಿಯವರು ಹೇಳಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪೂರ್ತಿ ಹಣ ಪಾವತಿಸಿದ್ದ ಎಂದರೆ ಸರಿಯಲ್ಲ. ಆದ್ದರಿಂದ ಮಂದಾಕಿಣಿಯವರು 1 ನೇ ಪ್ರತಿವಾದಿಯರ ವಿರುದ್ದ ಯಾವುದೇ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮಂದಾಕಿಣಿಯವರು ಮೃತರಾದ ನಂತರ 1 ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಮಂದಾಕಿಣಿಯವರ ನಡುವೆ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟಿ ಸವಾಲಿಗೆ ಕಾಲವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.